ಆದ ಕರ್ಮಯೋಗಿ ಶ್ರೀ ತಗಡೂರು ರಾಮಚಂದ್ರರಾವ್‌ರವರ ಮನೆಗೆ ಮಾನ್ಯ ಮುಖ್ಯ ಮಂತ್ರಿಗಳು ಸಂದರ್ಶನಕ್ಕಾಗಿ ಭೇಟಿ ನೀಡಿದಾಗ ಕರ್ನಾಟಕ ಸರ್ಕಾರವು ಶ್ರೀ ರಾಮಚಂದ್ರರಾಯರ ಬಗ್ಗೆ ಒಂದು ಸಾಕ್ಷ್ಯ ಚಿತ್ರ ತೆಗೆಯುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ ಅಥವಾ ಸಾಕ್ಷ್ಯ ಚಿತ್ರ ತೆಗೆಯಲಾಗಿದೆಯೇ ? ಇಲ್ಲದಿದ್ದರೆ, ಕೂಡಲೇ ಸರ್ಕಾರ ಕ್ರಮ ಕೈಗೊಂಡು ಇಳಿ ಪಯಸ್ಸಿನಲ್ಲಿರುವ ಇವರ ಸಾಕ್ಷ್ಯ ಚಿತ್ರವನ್ನು ಅದಷ್ಟು ಶೀಘ್ರವಾಗಿ ತೆಗೆಯಲು ಕ್ರಮ ಕೈಗೊಳ್ಳುವುದು. ಇಡೀ ಕರ್ನಾಟಕದಲ್ಲಿ ಖ್ಯಾತರಾದ ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀ ಬಿ. ಸಿದ್ದಲಿಂಗಯ್ಯನವರ ಬಗ್ಗೆ ಕೂಡ ಸಾಕ್ಷ್ಯ ಚಿತ್ರವನ್ನು ತೆಗೆಯುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ ರಘುಪತಿ (ಮಾನ್ಯ ಶಿಕ್ಷಣ ಸಚಿವರು).—ಮಾನ್ಯ ವೇದಾಂತ ಹೆಬ್ಬಿಗೆಯವರು ಶ್ರೀ ತಗಡೂರು ರಾಮಚಂದ್ರರಾಯರ ಬಗ್ಗೆ ಸಾಕ್ಷ್ಯ ಚಿತ್ರ ತೆಗೆಯಬೇಕು ಎಂದು ಹೇಳಿದ್ದಾರೆ, ಇದು ಸರ್ಕಾರದ ಗಮನದಲ್ಲಿದೆ. ಈಗ ತೆಗೆಯುವುದಕ್ಕೆ ಏರ್ಪಾಟು ಮಾಡುತ್ತಾ ಇದ್ದೇವೆ.

(3) ಅಲೆಂಬಿಕ್ ಗ್ಲಾಸ್ ಕಾರ್ಖಾನೆಯಲ್ಲಿ 'ಲೇ-ಆಫ್' ಘೋಷಿಸಿರುವ ಬಗ್ಗೆ

ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಅಧ್ಯಕ್ಷರೆ, ಬೆಂಗಳೂರಿನ ದಕ್ಷಿಣದಲ್ಲಿರುವ ಅಲೆಂಬಿಕ್ ಗ್ಲಾಸ್ ಫ್ಯಾಕ್ಟರಿಯನ್ನು ಮಾಲೀಕರು ನವೆಂಬರ್ 15, 1984ರಂದು ಲೇ ಆಫ್ ಮಾಡಿದರು. 23-2-85ರಂದು ಅದನ್ನು ಮುಚ್ಚಲು ಸರ್ಕಾರದಿಂದ ಅನುಮತಿ ಪಡೆಯಲು ಪ್ರಯತ್ನ ಪಟ್ಟರು. ಆದರೆ ಸರ್ಕಾರ ಅನುಮತಿ ನೀಡಲಿಲ್ಲ ಎನ್ನುವ ದೃಷ್ಟಿಯಿಂದ ಈ ವಿಷಯದ ಬಗ್ಗೆ ಮಾಲೀಕರು ಹೈಕೋರ್ಟಿಗೆ ಅರ್ಜಿ ಸಲ್ಲಿಸಿದರು, ಹೈಕೋರ್ಟಿನವರು ಮಾಲೀಕರು ಸಲ್ಲಿಸಿದ ಅರ್ಜಿಯನ್ನು ಸರ್ಕಾರಕ್ಕೆ ಪರಿಶೀಲನೆ ಮಾಡಲು ಕಳುಹಿಸಿದರು ; ಮಾಲೀಕರ ಪರವಾಗಿ ತೀರ್ಮಾನ ಕೊಡಲಿಲ್ಲ. ಸರ್ಕಾರ ಪುನಃ ಅವರಿಗೆ ಫ್ಯಾಕ್ಟರಿಯನ್ನು ಮುಚ್ಚಲು ಅನುಮತಿ ನೀಡಲಿಲ್ಲ, ಇದಾದನಂತರ ಮಾಲೀಕರು ಸಿವಿಲ್ ಕೋರ್ಟಿನಿಂದ ಇಂಜಂಕ್ಷನ್ ಪಡೆಯಲು (ಯಂತ್ರಗಳನ್ನು ಸಾಗಿಸಲು ನಿರ್ಬಂಧವಿಲ್ಲದಂತೆ) ಯತ್ನಿಸಿದರು, ಇದೂ ಸಿಗಲಿಲ್ಲ. ಇಷ್ಟೆಲ್ಲಾ ಇದ್ದರೂ ಈಗ ಯಂತ್ರಗಳನ್ನು ತೆಗೆದುಕೊಂಡು ಹೋಗಲು ಈ ಮಾಲೀಕವರ್ಗ ಯತ್ನಿಸುತ್ತಿದೆ ; ಅದನ್ನು ಕಾರ್ಮಿಕರು ತಡೆದಿದ್ದಾರೆ. ನನ್ನ ಹತ್ತಿರ ಎರಡು ಫೋಟೋಗಳಿವೆ ಅದನ್ನು ತಮಗೆ ಕಳಿಸಿಕೊಡುತ್ತೇನೆ. ಸರ್ಕಾರ ಮಧ್ಯೆ ಪ್ರವೇಶಿಸಿ ಕಾರ್ಮಿಕರಿಗೆ ನೆರವು ನೀಡದಿದ್ದಲ್ಲಿ ಕಾನೂನು ಉಲ್ಲಂಘನೆ ಮಾಡುತ್ತಿರುವ ಮಾಲೀಕರಿಗೆ ಸಹಾಯ ಮಾಡಿದಂತಾಗುತ್ತದೆ. 800 ಕಾರ್ಮಿಕರು ಬೀದಿ ಪಾಲಾಗುತ್ತಾರೆ. ಪೋಲೀಸರು ಮಧ್ಯೆ ಪ್ರವೇಶಿಸಿ ಸರ್ಕಾರ ಪರ್ಮಿಷನ್ ಕೊಡದೇ ಹೋದರೂ ಏಕೆ ಮಾಲೀಕರಿಗೆ ಸಪೋರ್ಟ್ ಮಾಡಬೇಕು ? ಏಕೆ ಎಂದು ಕೇಳಿದರೆ ನಮಗೆ ಗೊತ್ತಿಲ್ಲ, ನೀವು ಗಲಾಟೆ ಮಾಡಿದಿರಿ, ನಾವು ಬಂದೆವು ಎಂದು ಪೋಲೀಸರು ಕಾರ್ಮಿಕರನ್ನು ಹೆದರಿಸುತ್ತಾ ಇದ್ದಾರೆ. ಸರ್ಕಾರ ಮತ್ತು ಪೋಲೀಸರು ಸರಿಯಾದ ಕ್ರಮ ತೆಗೆದುಕೊಳ್ಳದೇ ಹೋದರೆ ಯಂತ್ರಗಳು ಹೋಗುತ್ತವೆ, ಕಾರ್ಮಿಕರು ಬೀದಿ ಪಾಲಾಗುತ್ತಾರೆ. ಆಗ ಸರ್ಕಾರ ಇದ್ದೂ ಪ್ರಯೋಜನವಿಲ್ಲ ; ಕಾರ್ಮಿಕ ಇಲಾಖೆ ಇದ್ದು ಪ್ರಯೋಜನವಿಲ್ಲ ; ನಾವು ನೀವು ಇದ್ದು ಪ್ರಯೋಜನವಿಲ್ಲ. ಈ ವಿಷಯ ಅತಿ ಜರೂರಿನ ವಿಷಯವಾದ್ದರಿಂದ, ಪೋಲೀಸರಿಗೂ ಕಾರ್ಮಿಕರಿಗೂ ವಿನಾಕಾರಣ ಘರ್ಷಣೆಯಾಗುವ ಸಂಭವವಿರುವುದರಿಂದ ಮಾನ್ಯ ಕಾರ್ಮಿಕ ಸಚಿವರು ಇದರ ಬಗ್ಗೆ ಸ್ಪಷ್ಟ ಹೇಳಿಕೆ ನೀಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ. ಮಂಜುನಾಥ್ (ಕಾರ್ಮಿಕ ಸಚಿವರು).—ಮಾನ್ಯ ಅಧ್ಯಕ್ಷರೇ, ನಾನು ಈ ಹೇಳಿಕೆಯನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ.

The Management of Alembic Glass Industries, Whitefield, Bangalore have laid off about 800 workers with effect from 15th November 1984 on grounds of power cut. They have offered lay off compensation to the workers as per the Industrial Disputes Act.

The Management of Alembic Glass Industries, Bangalore have also filed an application dated 23rd February 1985 for closure of their factory under Section 25-0(1) of the Industrial Disputes Act, 1947. The main reason for the closure application was short supply of electric power, as a result of which the management claimed that the unit was unable to meet given its minimum power requirements.

After hearing both parties an order was passed on 22nd April 1985 refusing permission for closure on the grounds that shortage of

electric power is only a temporary feature and does not warrant closure of a well-established factory which would render a large number of workers jobless and their families helpless.

Consequent to this order the Management of Alembic Glass Industries filed a petition seeking that either the order dated 22nd April 1985 be reviewedor the case be referred for adjudication to an Industrial Tribunal under Section 25-0(5) of the Industrial Disputes Act, 1947. During the pendency of this application the management filed a Writ Petition before the High Court for caushing the Government Order refusing permission for closure. The High Gourt issued a direction to Government to dispose off the review petition:

This petition was disposed off on 4th July 1985. Since neither the management nor the workers had made any new points to reconsider the order dated 22nd April 1985, it was felt that there was no reason to modify or review the order or to refer the case to an Industrial Tribunal.

The Writ Petition has been taken up for hearing. Government have advised the Government Pleader that power will be supplied in August 1985 if the management re-opences the factory.

As regards the shifting of machinery from the present premises permission of the Government of India and on NOC from the State Government is necessary under the Industries Development Regulation Act, 1951 in case of any proposal to change the location and shift the machinery. No application has been made to Government for this. In case there is any such move Government will take suitable action in accordance with law and in the interests of the workmen.

ಶ್ರೀ ಎಂ.ಎಸ್. ಕೃಷ್ಣನ್.—ಅಧ್ಯಕ್ಷರೆ, ಫೋಟೋ ತಂದುಕೊಟ್ಟಿದ್ದೇನೆ, ಅದಕ್ಕಿಂತಲೂ ಇನ್ನು ಏನು ಬೇಕು ?

ಅಧ್ಯಕ್ಷರು.—ಮಾನ್ಯ ಸದಸ್ಯರು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ಡಿ. ಮಂಜುನಾಥ್.—ಅಲ್ಲಿಂದ ಮೆಷಿನರಿಯನ್ನು ಬೇರೆ ಕಡೆ ತೆಗೆದುಕೊಂಡು ಹೋಗುವುದಕ್ಕೆ ಸರ್ಕಾರಕ್ಕೆ ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೇಳಿದ್ದಾರೆ, ಅದನ್ನು ಕೊಡಬೇಕು, ಅದೂ ಅಲ್ಲದೇ ಗವರ್ನ್‌ಮೆಂಟ್ ಆಫ್ ಇಂಡಿಯಾ ಪರಮಿಷನ್ ಕೊಡಬೇಕು. ಮೆಷಿನರಿ ತೆಗೆದುಕೊಂಡು ಹೋದರು ಎಂದರೆ, ನಾನು ಒಪ್ಪುವುದಿಲ್ಲ. ಅದರ ಬಗ್ಗೆ ನಾನು ವಿಚಾರ ಮಾಡುತ್ತೇನೆ.

(4) ವಿಷಯ :—ಬನಹಟ್ಟಿ ಮತ್ತು ರಬಕವಿ ನಗರಗಳಲ್ಲಿ ಕಾಮಾಲೆರೋಗ

ಶ್ರೀ ಬಾಗಲಕೋಟೆ ಗುರುಪಾದ ಶಿವಪ್ಪ.—ಜಮಖಂಡಿ ತಾಲ್ಲೂಕ್ ರಬಕವಿ ಬನಹಟ್ಟಿ ನಗರ ಪಾಲಿಕೆ ಸರ ಹದ್ದಿನಲ್ಲಿ ಕಾಮಾಲೆ ರೋಗದಿಂದ ಮೂವರು ಸತ್ತಿದ್ದು ಅನೇಕ ಜನರು ಆ ರೋಗದಿಂದ ಬಳಲುತ್ತಿದ್ದಾರೆ. ಇದು ಅತಿ ಗಂಭೀರ ವಿಷಯ. ಈ ಬಗ್ಗೆ ಆರೋಗ್ಯ ಇಲಾಖೆಯವರು ಈ ರೋಗ ತಡೆಯಲು ಯಾವ ಕ್ರಮ ಕೈಕೊಂಡಿದ್ದಾರೆ ಮತ್ತು ಈ ರೋಗ ಹಬ್ಬಲಿಕ್ಕೆ ಇರತಕ್ಕ ಕಾರಣಗಳ ಬಗ್ಗೆ ಸನ್ಮಾನ್ಯ ಆರೋಗ್ಯ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ.—ಅಧ್ಯಕ್ಷರೆ, ಮಾನ್ಯ ಆರೋಗ್ಯ ಸಚಿವರು ಮೇಲ್ಮನೆಯಲ್ಲಿ ಇದ್ದಾರೆ, ಮಾನ್ಯ ಸದಸ್ಯರು ಹೇಳಿರತಕ್ಕ ವಿಚಾರವನ್ನು ಅವರ ಗಮನಕ್ಕೆ ತಂದು ಕ್ರಮ ತೆಗೆದುಕೊಳ್ಳಲಿಕ್ಕೆ ಹೇಳುತ್ತೇನೆ.